ಅದರ ಬಗ್ಗೆ ಇತ್ಯರ್ಥ ಮಾಡುವ ಸಲುವಾಗಿ ನಾನು ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಇದನ್ನು ಚರ್ಚೆ ಮಾಡಿ ಇದರ ಬಗ್ಗೆ ಶೀಘ್ರವಾಗಿ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಇದರೆ ಬಗ್ಗೆ ನಾನು ಇನ್ನೊಂದು ವಿಷಯವನ್ನು ಸದನದ ಗಮನಕ್ಕೆ ತರುತ್ತೇನೆ. ಆಡಳಿತದ ಸುಧಾರಣಾ ಆಯೋಗವೂ ಸಹ ತನ್ನ ವರದಿಯಲ್ಲಿ ವಿಜಯ ಫಿಲಂ ಸಂಸ್ಥೆ ಹಾಗೂ ಆದರ್ಶ ಫಿಲಂ ಸಂಸ್ಥೆಯಂತಹ ಸಹಾಯಾನುದಾನಿತ ಸಂಸ್ಥೆಗಳಿಗೆ ಅನುದಾನವನ್ನು ನಿಲ್ಲಿಸತಕ್ಕಂಥ ಶಿಫಾರಸ್ಸನ್ನು ಮಾಡಿರುವುದನ್ನು ತಾವು ಗಮನಿಸಬೇಕು. ಮತ್ತೆ ಇಲಾಖಾ ವಿಷಯ ಸಮಿತಿಯೂ ಸಹ ಅನುದಾನಿತ ಸಂಸ್ಥೆಗಳಿಗೆ ಹೆಚ್ಚು ಹಣವನ್ನು ನೀಡುವ ಬದಲಿಗೆ ಅದರ ವಿಸ್ತಾರತೆಯನ್ನು ಹೆಚ್ಚು ಸಂಘ ಸಂಸ್ಥೆಗಳಿಗೆ ವಿಸ್ತರಣೆ ಮಾಡಿ ಎನ್ನುವಂತಹ ಒಂದು ಸಲಹೆಯನ್ನೂ ಸಹ ಮಾಡಿರುತ್ತದೆ ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತಾ, ಅಕಾಡೆಮಿಗಳಿಗೂ ಇದಕ್ಕೂ ಇರುವಂತಹ ವ್ಯತ್ಯಾಸವನ್ನು ನಾನು ನಿಮಗೆ ಹೇಳಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಮಾನ್ಯ ಅಧ್ಯಕ್ಷರೇ, ಅಕಾಡೆಮಿಗಳಿಗೂ ಸಂಘ ಸಂಸ್ಥೆಗಳಿಗೂ ಕೊಡುತ್ತಿರತಕ್ಕಂಥ ಅನುದಾನ, ಅದರಲ್ಲಿ ಇರತಕ್ಕಂಥ ವ್ಯತ್ಯಾಸ ನನಗೆ ಗೊತ್ತಿದೆ. ನಾನು ಮೂಲಭೂತವಾಗಿ ಕೇಳುತ್ತಿರತಕ್ಕಂಥದ್ದು, ನಿಮ್ಮ ಸರ್ಕಾರ ನೀತಿ ಇದೇನಾ? ಪ್ರತಿ ವರ್ಷವೂ ಅನುದಾನವನ್ನು ಕಡಿಮೆ ಮಾಡಿಕೊಂಡು ಹೋಗುತ್ತೀರಾ? ಏಕೆಂದರೆ, ಅಕಾಡೆಮಿಗಳು, ಅಲ್ಲಿರತಕ್ಕಂಥ ಅಧ್ಯಕ್ಷರು ....

ಅಧ್ಯಕ್ಷರು: ಕಡಿತ ಮಾಡಿಲ್ಲ ಎಂದು ಮಾನ್ಯ ಸಚಿವರು ಹೇಳುತ್ತಿದ್ದಾರಲ್ಲವೇ?

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಮಾಡಿದ್ದಾರೆ ಸಾರ್. ಮಾನ್ಯ ಸಚಿವರು ಆ ಬಗ್ಗೆ ಉತ್ತರ ಕೊಟ್ಟಿದ್ದಾರೆ. ರಿಟನ್ ಆನ್ಸರ್ ಇದು. ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಅನುದಾನವನ್ನು ನಾನು ಕಡಿಮೆ ಮಾಡಿದ್ದೇನೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಹಾಗಾದರೆ ಇದೇ ನಿಮ್ಮ ನೀತಿಯೇ? ನಾನು ಇನ್ನೇನೂ ಅವರಿಗೆ ಒತ್ತಾಯ ಮಾಡುವುದಕ್ಕಾಗುವುದಿಲ್ಲ. ಕನ್ನಡದ ಬಗ್ಗೆ ಸರ್ಕಾರದ ಧೋರಣೆ ಇದು ಎಂದು ಹೇಳಿದರೆ ನನ್ನದೇನೂ ತಕರಾರು ಇಲ್ಲ. ಪ್ರಶ್ನೋತ್ತರ ವೇಳೆಯಲ್ಲಿ ಮತ್ತೆ ಏನನ್ನು ನಾನು ಅಪೇಕ್ಷೆ ಮಾಡುವುದಕ್ಕಾಗುತ್ತದೆ? ಹಾಗಾದರೆ ಇದು ಸರ್ಕಾರದ ನೀತಿಯೇ?

ಶ್ರೀಮತಿ ರಾಣಿ ಸತೀಶ್: ಮಾನ್ಯ ಅಧ್ಯಕ್ಷರೇ, ಈ 2001-2002ಕ್ಕೂ 2002-2003ಕ್ಕೂ ಇರುವಂತಹ ವ್ಯತ್ಯಾಸವನ್ನು ತಾವು ಗಮನಿಸಬೇಕು. ಮುಂಚೆ 122 ಲಕ್ಷ ರೂಪಾಯಿಗಳು ಇದ್ದದ್ದನ್ನು 166 ಲಕ್ಷ ರೂಪಾಯಿಗಳಿಗೆ ನಾವು ಹೆಚ್ಚು ಮಾಡಿದ್ದನ್ನು ತಾವು ಗಮನಿಸಿದ್ದೀರಿ. ಈಗ ಎಲ್ಲಾ ಇಲಾಖೆಗಳಿಗೂ ಅನ್ವಯವಾಗುವಂತೆ ಯೋಜನಾ ವೆಚ್ಚ ಕಡಿತ ಮಾಡಿರುವಂತೆ ನಮ್ಮಲ್ಲೂ 2 ಲಕ್ಷ ರೂ ಕಡಿತ ಮಾಡಿರುವಂತಾದ್ದನ್ನು ನಾನು ತಮ್ಮ ಗನಮಕ್ಕೆ ತರುವುದಕ್ಕೆ ಇಚ್ಛೆ ಪಡುತ್ತೇನೆ. ಅದರ ಹಿಂದಿನದು 2002-2003ರಲ್ಲಿಯೂ, 2001-2002ಕ್ಕೂ ವ್ಯತ್ಯಾಸ ನೀವು ನೋಡಿದರೆ ಅದು ಎಷ್ಟು ದುಪ್ಪಟ ಆಗಿದೆ ಎನ್ನುವುದನ್ನು ತಾವು ಗಮನಿಸಬಹುದು.

ದೊಡ್ಡ ಬಳ್ಳಾಪುರ ತಾಲ್ಲೂಕಿನಲ್ಲಿ ಕೊಳಚೆ ಪ್ರದೇಶದ ಅಭಿವೃದ್ಧಿ ಕಾರ್ಯಕ್ರಮಗಳು

129 (837) ಶ್ರೀ ವಿ. ಕೃಷ್ಣಪ್ಪ (ದೊಡ್ಡಬಳ್ಳಾಪುರ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿನ ಕೊಳಚೆ ಪ್ರದೇಶಗಳು ಯಾವುವು?

ಆ) ಈ ಕೊಳಚೆ ಪ್ರದೇಶಗಳ ಅಭಿವೃದ್ಧಿಗೆ ಸರ್ಕಾರ ಹಮ್ಮಿಕೊಂಡಿರುವ ಕಾರ್ಯಕ್ರಮಗಳ ಯಾವುವು?

ಇ) ಅಭಿವೃದ್ಧಿ ಕಾರ್ಯಕ್ರಮಗಳಿಗೆ ಸರ್ಕಾರದಿಂದ ಒದಗಿಸಿರುವ ಹಣ ಎಷ್ಟು? (ರಾಜ್ಯ ಹಾಗೂ ಕೇಂದ್ರ ಸರ್ಕಾರಗಳಿಂದ)

ಈ) ಪ್ರಸಕ್ತ ಸಾಲಿನಲ್ಲಿ ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ತೆಗೆದುಕೊಂಡಿರುವ ಕಾರ್ಯಕ್ರಮಗಳು ಯಾವುವು? ಇದಕ್ಕಾಗಿ ಎಷ್ಟು ಹಣ ಒದಗಿಸಲಾಗಿದೆ.

ಶ್ರೀ ಸಿ.ಆರ್. ಸಗೀರ್ ಅಹಮದ್ (ವಸತಿ ಸಚಿವರು):

ಅ) ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಒಟ್ಟು 55 ಘೋಷಿತ ಕೊಳಚೆ ಪ್ರದೇಶಗಳಿದ್ದು. ವಿವರಗಳನ್ನು ಅನುಬಂಧ 'ಅ' ನಲ್ಲಿ ಲಗತ್ತಿಸಿದೆ.

ಆ) ಮಂಡಳಿಯು ಕೊಳಚೆ ಪ್ರದೇಶಗಳ ಅಭಿವೃದ್ಧಿಗಾಗಿ ಪ್ರತಿಸಾಲಿನಲ್ಲಿ ಈ ಕೆಳಕಂಡ ಯೋಜನೆಗಳನ್ನು ಹಮ್ಮಿಕೊಂಡು ಅನುಷ್ಠಾನಗೊಳಿಸಲಾಗುತ್ತಿದೆ.

(1) ಕೊಳಚೆ ಪ್ರದೇಶಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು.

(2) ಕೊಳಚೆ ನಿವಾಸಿಗಳಿಗೆ ಗೃಹಗಳನ್ನು ನಿರ್ಮಿಸುವುದು.

ಇ) ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಘೋಷಿತ 11 ಕೊಳಚೆ ಪ್ರದೇಶಗಳ ಕಾರ್ಯಕ್ರಮಕ್ಕಾಗಿ 2002-03 ರ ಆಯವ್ಯಯದಲ್ಲಿ ರಾಜ್ಯ ಸರ್ಕಾರವು 40.15 ಲಕ್ಷ ರೂ.ಗಳನ್ನು ಒದಗಿಸಲಾಗಿದೆ.

ಇದೇ ಸಾಲಿನಲ್ಲಿ ವಸತಿ ಯೋಜನೆಯಡಿ ರಾಜ್ಯ ಸರ್ಕಾರದ ಸಹಾಯಧನ ಮೊತ್ತ ಹುಡ್ಕೋ ಸಂಸ್ಥೆಯ ಸಾಲದ ನೆರವಿನಿಂದ 175 ವಸತಿ ಗೃಹಗಳ ನಿರ್ಮಾಣಕ್ಕಾಗಿ 102.00 ಲಕ್ಷ ರೂ.ಗಳನ್ನು ಒದಗಿಸಿದೆ.

ಈ) ಪ್ರಸಕ್ತ ಸಾಲಿನಲ್ಲಿ ದೊಡ್ಡಬಳ್ಳಾಪುರ ಕಚೇರಿಪಾಳ್ಯ, ಕೊಳಚೆ ಪ್ರದೇಶದಲ್ಲಿ ಚರಂಡಿ, ಚಪ್ಪಡಿ ರಸ್ತೆ, ಶೌಚಾಲಯ ಕೊಳವೆ ಬಾವಿ ದುರಸ್ತಿ ಕಾಮಗಾರಿಗಳನ್ನು ಕೈಗೊಳ್ಳಲು 6.00 ಲಕ್ಷ ರೂ.ಗಳನ್ನು ಒದಗಿಸಲಾಗಿದೆ. ಇದರ ಜೊತೆಗೆ ಪ್ರಸಕ್ತ ಸಾಲಿನ ವಸತಿಯೋಜನೆಯಡಿ ರಾಜ್ಯ ಸರ್ಕಾರದ ಸಹಾಯಧನ ಮತ್ತು ಹುಡ್ಕೋ ಸಾಲದ ನೆರವಿನೊಂದಿಗೆ ದೊಡ್ಡಬಳ್ಳಾಪುರದ ದುರ್ಗಾಜೋಗಿಹಳ್ಳಿ ಕೊಳಚೆ ಪ್ರದೇಶದಲ್ಲಿ 14.00 ಲಕ್ಷ ಅಂದಾಜು ವೆಚ್ಚದಲ್ಲಿ 25 ಮನೆಗಳ ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳಲಾಗಿದೆ.

Annexure-A to the L.A. Question No.837

Statement Showing the Bangalore Rural Declared Slum Details

Sl. No.	District	City/Town	Slum Name
1	2	3	4
1	Bangalore Rural	Kanakapura	Budigere
2			Kurupete
3			Malegalu Harijan Colony
4			Malekote Vinaykanagar

1	2	3	4
5			Jayaprakashnagar
6			Behind KSRTC Bus stop
7			Kotehalla
8			Maharajkatte
9	Bangalore Rural	Doddaballapura	5th Block Town Limite
10			5th Block
11			Khasbhag
12			Gangadharpur
13			Kacheripalya
14			Rochipura
15			Dargajoganahalli
16			Sanjaygandhinagar
17			Veerabadranapalya
18			Siddanayakanhalli
19			Muthur
20	Bangalore Rural	Devanahalli	A.K.Colony
21			Gowripalya
22			Poojammanapalaya
23			Narayananayakan Thota
24			D.V.M. Colony
25	Bangalore Rural	Vijayapur	Sathayamma Temple
26			Mangasandra
27			Basavanakunte
28			A.D. Colony
29		Chennapatna	Indira Cottage, Anandpuram
30			Kurubar Maidan, behind Railway Platform
31			Chikkammullur
32			Tamiliyan Colony
33			New A.K. Colony
34			Sweepers Colony
35		Magadi	Muslim Colony
36			Harijan Colony
37			Tirumala A.K.Colony
38			Hosapete A.K.Colony
39			Varaha Colony
40			Kote Area
41			Someswarpura
42		Ramanagar	Gandhinagar

1	2	3	4
43			Settyhalli
44			Izoor
45			Yakoobnagar
46			Arekeswara
47			Behind Leo Tent
48			Yarabnagar
49		Hosakote	Bhovi Colony
50			Khazi Mohalla
51		Nelamangala	Jayanagar 1st Phase
52			Jayanagar IInd Phase
53			Chennappa Kalyani
54			Indira Nagar
55			Raya Nagar

ಶ್ರೀ ವಿ.ಕೃಷ್ಣಪ್ಪ: ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಉತ್ತರಗಳನ್ನು ಒದಗಿಸಿದ್ದಾರೆ. ಒಂದು ನಗರಸಭೆಯ ವ್ಯಾಪ್ತಿಯಲ್ಲಿ 3-4 ಕೊಳಚೆ ಪ್ರದೇಶಗಳಿವೆ. ಅದರಲ್ಲಿ ಯಾವುದನ್ನು ಕೊಳಚೆ ನಿರ್ಮೂಲನಾ ಮಂಡಳಿಯವರು ಸೆಲೆಕ್ಟ್ ಮಾಡುತ್ತಾರೆ? ಯಾವ ಬೇಸಿಸ್ ಮೇಲೆ ಸೆಲೆಕ್ಟ್ ಮಾಡುತ್ತಾರೆ ಅನ್ನತಕ್ಕಂಥದ್ದನ್ನು ಮಾನ್ಯ ವಸತಿ ಸಚಿವರು ದಯವಿಟ್ಟು ತಿಳಿಸಬೇಕು. ಕೊಳಚೆ ನಿರ್ಮೂಲನಾ ಮಂಡಳಿಗೆ ದೊಡ್ಡಬಳ್ಳಾಪುರದಲ್ಲಿ 14 ಲಕ್ಷ ರೂಪಾಯಿಗಳನ್ನು 25 ಮನೆಗಳಿಗೆ ಮಂಜೂರು ಮಾಡಿದ್ದೇವೆ ಎಂದು ಹೇಳಿದ್ದೀರಿ. ಹಾಗಾದರೆ ಒಂದು ಮನೆಗೆ ಎಷ್ಟು? 15 ಮನೆಗಳಿಗೆ 14 ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆ ಎಂದು ಅವರ ಉತ್ತರದಲ್ಲಿ ಕೊಟ್ಟಿದ್ದಾರೆ. ಹಾಗಾದರೆ ಒಂದು ಮನೆಗೆ ಎಷ್ಟು ಬಿತ್ತು? ಮಾನ್ಯ ಸಚಿವರು ದಯವಿಟ್ಟು ಇದನ್ನು ತಿಳಿಸಬೇಕು. ಅದರಲ್ಲಿ ಕೇಂದ್ರ ಸರ್ಕಾರದ ಹಣ ಎಷ್ಟು? ರಾಜ್ಯ ಸರ್ಕಾರದ ಹಣ ಎಷ್ಟು? ಸಾಲ ಎಷ್ಟು ಕೊಟ್ಟಿದ್ದಾರೆ? ಅದರಲ್ಲಿ ಸಹಾಯಧನ ಎಷ್ಟು ಇದೆ ಎನ್ನತಕ್ಕಂಥದ್ದನ್ನು ಮಾನ್ಯ ಸಚಿವರು ತಿಳಿಸಬೇಕು.

ಶ್ರೀ ಸಿ.ಆರ್. ಸಗೀರ್ ಅಹಮದ್: ಸನ್ಮಾನ್ಯ ಸಭಾಧ್ಯಕ್ಷರೇ, ಈಗ ಅವರು ಕೇಳಿರುವಂತಹ ಪ್ರಶ್ನೆಗೆ ಉತ್ತರ ಕೊಟ್ಟಿದ್ದೇವೆ. ಕೊಳಚೆ ಪ್ರದೇಶ ಘೋಷಣೆ ಮಾಡುವಂತಾದ್ದರ ಬಗ್ಗೆ ಹೇಳುವುದಾದರೆ, ಎಲ್ಲಾ ಸದಸ್ಯರು ಮತ್ತು ಮಾನ್ಯ ಸದಸ್ಯರು ಕೋರಿರುವಂತೆ ಕೊಳಚೆ ಪ್ರದೇಶವನ್ನು ಘೋಷಣೆ ಮಾಡುವಂತಾದ್ದು, ಆ ಜಿಲ್ಲೆಯ ಜಿಲ್ಲಾಧಿಕಾರಿಗೆ ಸೂಚನೆ ನೀಡುವುದರ ಮುಖಾಂತರ. ಆಲ್ಲಿಯ ಕೊಳಚೆ ಪ್ರದೇಶದ ಸ್ಥಿತಿಗತಿಗಳಿಗನುಗುಣವಾಗಿ ಈ ಪ್ರದೇಶವನ್ನು ಪ್ರದೇಶವನ್ನಾಗಿ ಘೋಷಿಸಬೇಕೇ ಬೇಡವೆ ಎನ್ನುವುದರ ಬಗ್ಗೆ ನಿರ್ಧರಿಸಲು ಸಂಪೂರ್ಣವಾದಂತಹ ವಿಚಾರವನ್ನು ಜಿಲ್ಲಾಧಿಕಾರಿಗಳ ಗಮನಕ್ಕೆ ತಂದಿದ್ದೇವೆ. ಈಗ ನಾವು ಮಾಹಿತಿ ನೀಡಿರುವಂತೆ ಬೆಂಗಳೂರು (ಗ್ರಾಮಾಂತರ) ಜಿಲ್ಲೆಯಲ್ಲಿ ಈ ನಮ್ಮ ಮಾನ್ಯ ಸದಸ್ಯರ ಕ್ಷೇತ್ರ ಸೇರಿದಂತೆ ಒಟ್ಟು 55 ಘೋಷಿತ ಕೊಳಚೆ ಪ್ರದೇಶಗಳಿವೆ. ಇದರಲ್ಲಿ ನಾವು ಕಾಮಗಾರಿಗಳನ್ನು ಶೇಕಡ 50ರಷ್ಟು ರಾಜ್ಯ ಮತ್ತು ಶೇಕಡ 50ರಷ್ಟು ಕೇಂದ್ರದ ಪಾಲಿನಂತೆ ಕೆಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ. ವಿಶೇಷವಾಗಿ ಇಡೀ ರಾಜ್ಯಾದ್ಯಂತ ಕೊಳಚೆ ಪ್ರದೇಶದ ಅಭಿವೃದ್ಧಿಗಾಗಿ 274 ಲಕ್ಷ ರೂಪಾಯಿಗಳಷ್ಟು

ಹೊಸ ಯೋಜನೆಯನ್ನು ನಾವು ಈಗ ಹಮ್ಮಿಕೊಂಡಿದ್ದೇವೆ. ಅದರಲ್ಲಿ ನಮ್ಮ ಸದಸ್ಯರ ಕ್ಷೇತ್ರದ ಅಭಿವೃದ್ಧಿಗಾಗಿಯೂ ನಾವು ಒಂದು ಯೋಜನೆ ಹಾಕಿಕೊಂಡಿದ್ದೇವೆ. ಅದರಲ್ಲಿ ನಾವು 175 ಮನೆಗಳನ್ನು 102 ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡುವುದರ ಮುಖಾಂತರ ಮನೆಗಳನ್ನು ನಿರ್ಮಿಸಿಕೊಡುತ್ತೇವೆ ಎಂದು ಹೇಳಿದ್ದೇವೆ. ಇದರಲ್ಲಿ ರಾಜ್ಯ ಸರ್ಕಾರದ ಪಾಲು ಶೇಕಡ 50ರಷ್ಟು ಮತ್ತು ಕೇಂದ್ರ ಸರ್ಕಾರದ ಪಾಲು ಶೇಕಡ 50ರಷ್ಟು. ಜೊತೆಗೆ ಇನ್ನೂ ವಿಶೇಷವಾದಂತಹ ಕಾರ್ಯಕ್ರಮ ಅಂತ ಹೇಳಿದರೆ, ಕೆಲವು ಘೋಷಿತ ಕೊಳಚೆ ಪ್ರದೇಶಗಳಲ್ಲಿ ವಾಸಿಸುತ್ತಿರುವಂತಹ ಕೊಳಚೆ ಪ್ರದೇಶದ ನಿವಾಸಿಗಳಿಗೆ ಮನೆ ದುರಸ್ತಿಗಾಗಿ ನಾವು ಹಣವನ್ನು ಒದಗಿಸಿಕೊಡುತ್ತಿದ್ದೇವೆ. ಆ ಮನೆ ದುರಸ್ತಿಗಾಗಿ ಒದಗಿಸಿಕೊಟ್ಟಿರುವಂತಾದ್ದರಲ್ಲಿ ಈ 14 ಲಕ್ಷ ರೂಪಾಯಿಗಳನ್ನು ನಾವು ಖರ್ಚು ಮಾಡಿದ್ದೇವೆ. ಘೋಷಿತ ಕೊಳಚೆ ಪ್ರದೇಶದಲ್ಲಿ ರಸ್ತೆ, ಚರಂಡಿ ಇತ್ಯಾದಿ ದುರಸ್ತಿಗಾಗಿ ಇಲ್ಲಿ ಹೇಳಿರುವಂತೆ 6 ಲಕ್ಷ ರೂಪಾಯಿಗಳನ್ನು ನಾವು ಒದಗಿಸಿಕೊಟ್ಟಿದ್ದೇವೆ. ಇನ್ನು ಮುಂದಿನ ದಿನಗಳಲ್ಲಿ ಘೋಷಿತ ಕೊಳಚೆ ಪ್ರದೇಶಗಳಲ್ಲಿ ರಾಜ್ಯ ಹಾಗೂ ಕೇಂದ್ರದ ಸಹಾಯದೊಂದಿಗೆ ವ್ಯಾಂಬೆ ಯೋಜನೆ ಅಡಿಯಲ್ಲಿ 33 ಸಾವಿರ ಮನೆಗಳನ್ನು ನಮ್ಮ ರಾಜ್ಯದ 2800 ಕೊಳಚೆ ಪ್ರದೇಶಗಳಲ್ಲಿ ವಾಸಿಸುತ್ತಿರುವಂತಹ 23 ಲಕ್ಷ ಜನರಿಗೆ ನಿರ್ಮಿಸಿ ಕೊಡಲು ಈ ಕಾರ್ಯಕ್ರಮ ಹಮ್ಮಿಕೊಳ್ಳಲು ನಾವು ಆಲೋಚನೆ ಮಾಡಿದ್ದೇವೆ. ಈ ಕಾರ್ಯಕ್ರಮ ಈ ವರ್ಷದಿಂದಲೇ ಜಾರಿಗೆ ತರುವಂತಹ ಎಲ್ಲಾ ಪ್ರಯತ್ನಗಳನ್ನು ನಾವು ಮಾಡುತ್ತಿದ್ದೇವೆ.

ಶ್ರೀ ವಿ. ಕೃಷ್ಣಪ್ಪ: ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ನನ್ನ ಪ್ರಶ್ನೆಗೆ ಸ್ಪಷ್ಟವಾದಂತಹ ಉತ್ತರವನ್ನು ಹೇಳಲಿಲ್ಲ, ದೊಡ್ಡಬಳ್ಳಾಪುರದಲ್ಲಿ 25 ಮನೆಗಳಿಗೆ 14 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದ್ದೀರಿ. ಕೊಳಚೆ ಪ್ರದೇಶದಲ್ಲಿ ಒಂದು ಮನೆಗೆ ಎಷ್ಟು ಹಣವನ್ನು ಖರ್ಚು ಮಾಡುತ್ತಾರೆ ಎನ್ನತಕ್ಕಂಥದ್ದನ್ನು ಅವರು ಸ್ಪಷ್ಟವಾಗಿ ಹೇಳಲಿಲ್ಲ. ಅದಕ್ಕೆ ಸಬ್ಸಿಡಿ ಎಷ್ಟು ಕೊಡುತ್ತಾರೆ? ಸಬ್ಸಿಡಿ ಹಣ ರಾಜ್ಯ ಸರ್ಕಾರದ್ದಾ ಅಥವ ಕೇಂದ್ರ ಸರ್ಕಾರದ್ದಾ? ಅದರ ಬಗ್ಗೆ ಮಾಹಿತಿ ಕೊಡಬೇಕು.

ಶ್ರೀ ಸಿ.ಆರ್. ಸಗೀರ್ ಅಹಮದ್: ಮಾನ್ಯ ಅಧ್ಯಕ್ಷರೇ, ಈಗ ನಮ್ಮ ದುರ್ಗಾಜೋಗಿಹಳ್ಳಿ ಕೊಳಚೆ ಪ್ರದೇಶದಲ್ಲಿ 14 ಲಕ್ಷ ರೂಪಾಯಿಗಳನ್ನು ನಾವು ವೆಚ್ಚ ಮಾಡಿದ್ದೇವೆ. ಪ್ರತಿಯೊಂದು ಮನೆಗೆ 46 ಸಾವಿರ ರೂಪಾಯಿಗಳನ್ನು ನಾವು ನಿಗದಿಪಡಿಸಿದ್ದೇವೆ. ಅದರಲ್ಲಿ ಒಂದು ಮನೆಗೆ 10 ಸಾವಿರ ರೂಪಾಯಿಗಳ ಸಹಾಯ ಧನ, 46 ಸಾವಿರ ರೂಪಾಯಿಗಳು ಲೋನ್, ಹೀಗೆ ಪ್ರತಿಯೊಂದು ಮನೆಗೆ ಒಟ್ಟು 56 ಸಾವಿರ ರೂಪಾಯಿಗಳು. 10 ಸಾವಿರ ರೂಪಾಯಿಗಳು ಎಂದು ನಾವೇನು ರಾಜ್ಯ ಸರ್ಕಾರದಿಂದ ನೀಡುತ್ತಿದ್ದೇವೆ, ಆದುದರಿಂದ ಅದು 14 ಲಕ್ಷ ರೂಪಾಯಿಗಳು ಎಂದು ನಾವು ಹೇಳಿದ್ದೇವೆ.

ಶ್ರೀ ವಿ. ಕೃಷ್ಣಪ್ಪ: 25 ಮನೆಗಳಿಗೆ 14 ಲಕ್ಷ ರೂಪಾಯಿಗಳು ಎಂದು ಹೇಳುತ್ತಿದ್ದಾರೆ. ಅದು ತಪ್ಪಾ?

ಅಧ್ಯಕ್ಷರು: ಅದರ ಬಗ್ಗೆ ಅವರ ಕಛೇರಿಯಲ್ಲಿ ಹೋಗಿ ಮಾತನಾಡ್ರಿ.

ಶ್ರೀ ಕೆ.ಎಂ. ಕೃಷ್ಣಮೂರ್ತಿ: 5 ಸಾವಿರ ರೂಪಾಯಿಗಳನ್ನು ಫಲಾನುಭವಿಗಳಿಂದ ವಸೂಲು ಮಾಡುತ್ತಿದ್ದಾರೆ.

ಅಧ್ಯಕ್ಷರು: ಇಲ್ಲಿ ಒಂದು ಪ್ರಶ್ನೆ ಏನು ಅಂದರೆ, ಚಿಕ್ಕ ಪುಟ್ಟ ಕ್ಲಾರಿಫಿಕೇಷನ್ಸ್‌ಗೆ ತಾವು ಮಾನ್ಯ ಸಚಿವರ ಕಛೇರಿಗೆ ಹೋಗಿ ಮಾತನಾಡಿ. ಅದಕ್ಕಾಗಿ ಈ ಹೌಸ್‌ನ ಸಮಯವನ್ನು ನಾವ್ಯಾಕೆ ತೆಗೆದುಕೊಳ್ಳೋಣ?

ಶ್ರೀ ಕೆ.ಎಂ. ಕೃಷ್ಣಮೂರ್ತಿ: ಮಾನ್ಯ ಸಭಾಧ್ಯಕ್ಷರೇ, ಎಲ್ಲಾ ಕೊಳಚೆ ಪ್ರದೇಶಗಳ ಫಲಾನುಭವಗಳಿಂದ 5 ಸಾವಿರ ರೂಪಾಯಿಗಳನ್ನು ವಸೂಲಿ ಮಾಡುತ್ತಿದ್ದಾರೆ. ಫಲಾನುಭವಿಗಳು 5 ಸಾವಿರ ರೂಪಾಯಿಗಳನ್ನು ಕೊಡಬೇಕೆಂದರೆ ಬಹಳ ಕಷ್ಟವಾಗುತ್ತದೆ. ಆದುದರಿಂದ ಅದಕ್ಕೆ ಮಾನ್ಯ ಸಚಿವರು ವಿವರಣೆ ನೀಡಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು: ಮಾನ್ಯ ವಸತಿ ಸಚಿವರು 5,100 ರೂಪಾಯಿಗಳನ್ನು ಕಲೆಕ್ಟ್ ಮಾಡುವುದಕ್ಕೆ ವಿನಾಯಿತಿ ಏನಾದರೂ ನೀಡುತ್ತಾರೆಯೇ?

ಶ್ರೀ ಸಿ.ಆರ್. ಸಗೀರ್ ಅಹಮದ್: ಮಾನ್ಯ ಅಧ್ಯಕ್ಷರೇ, ಮೊನ್ನೆಯೂ ಸಹ ಮಾನ್ಯ ಹಿರಿಯ ಸದಸ್ಯರಾದಂತಹ ಸಿಂಧ್ಯಾರವರು ಈ ಪ್ರಶ್ನೆಯನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ನಾನು ಇದನ್ನು ಪರಿಶೀಲಿಸುತ್ತೇನೆ ಎಂದು ಆಗ ಹೇಳಿದ್ದೇನೆ. ಅವರೇನು ಹೇಳಿದ್ದಾರೆ, 1000 ರೂಪಾಯಿಗಳನ್ನಾದರೂ ತಾವು ಮುಂಗಡ ಹಣ ತೆಗೆದುಕೊಳ್ಳುವಂತಾದ್ದರ ಬಗ್ಗೆ ಒಂದು ನಿರ್ಣಯ ಮಾಡುತ್ತೀರಾ ಎಂದು ಕೇಳಿದ್ದಾರೆ. ನಾನು ಅದನ್ನು ಪರಿಶೀಲಿಸಿ ತಮಗೆ ಉತ್ತರ ನೀಡುತ್ತೇನೆ ಎಂದು ಹೇಳಿದ್ದೇನೆ. ಅದೇ ಉತ್ತರವನ್ನು ಮಾನ್ಯ ಕೃಷ್ಣಮೂರ್ತಿಯವರ ಗಮನಕ್ಕೆ ತರುತ್ತೇನೆ.

ಶ್ರೀ ಬಿ.ಎನ್. ಬಚ್ಚೇಗೌಡ: ಸನ್ಮಾನ್ಯ ಅಧ್ಯಕ್ಷರೇ, ಕೊಳಚೆ ಪ್ರದೇಶಗಳಲ್ಲಿ ವಾಸ ಮಾಡುವಂತಹವರಿಗೆ ನಿವೇಶನ ಮತ್ತು ಹಕ್ಕುಪತ್ರ ಕೊಟ್ಟಿಲ್ಲ, ಸುಮಾರು 25 ಲಕ್ಷದಷ್ಟು ಜನ ಕೊಳಚೆ ಪ್ರದೇಶದಲ್ಲಿ ವಾಸ ಮಾಡುತ್ತಾರೆ ಎಂದು ಹೇಳಿದ್ದೀರಿ. ತಾವೇನು ಅವರಿಗೆ ಮನೆಗಳನ್ನು ಕೊಡಬೇಕೆಂದು ತೀರ್ಮಾನ ಮಾಡಿದ್ದೀರಿ, ಅವರಿಗೆ ಇದುವರೆಗೂ ಹಕ್ಕುಪತ್ರಗಳನ್ನೇ ಕೊಟ್ಟಿಲ್ಲ. ಅಕ್ರಮವಾಗಿ ಅಲ್ಲಿ ವಾಸ ಮಾಡುತ್ತಿದ್ದಾರೆ. ಅಕ್ರಮವನ್ನು ಸಕ್ರಮ ಮಾಡುವ ಕಾರ್ಯಕ್ರಮ ಕೊಳಚೆ ಪ್ರದೇಶಗಳಲ್ಲಿ ವಾಸ ಮಾಡುವಂತಹವರಿಗೆ ಇದೆಯೇ?

ಶ್ರೀ ಸಿ.ಆರ್. ಸಗೀರ್ ಅಹಮದ್: ಮಾನ್ಯ ಅಧ್ಯಕ್ಷರೇ, ಘೋಷಿತ ಕೊಳಚೆ ಪ್ರದೇಶಗಳಲ್ಲಿ ವಾಸಿಸುತ್ತಿರುವಂತಹ ಜನರಿಗೆ ನಾವು ಗುರುತಿನ ಚೀಟಿಯನ್ನು ಕೊಡುವುದರ ಮೂಲಕ ಅವರಿಗೆ ಮನೆ ಕಟ್ಟಿಸುವಂತಾದ್ದರ ಬಗ್ಗೆ ಆಗಲೇ ನಾವು ಮುತುವರ್ಜಿಯನ್ನು ನಾವು ವಹಿಸಿದ್ದೇವೆ. ಹಿಂದಿನ ಅಧಿವೇಶನದಲ್ಲಿ ಒಂದು ಮಸೂದೆಯನ್ನು ನಾನು ತಂದೆ, ಅದಕ್ಕೆ ತಾವೆಲ್ಲಾ ಒಪ್ಪಿಗೆ ಕೊಟ್ಟಿದ್ದೀರಿ. ಈ ಘೋಷಣೆಯಾಗದೇ ಇರುವಂತಹ ಪ್ರದೇಶಗಳು ಕೊಳಚೆ ಪ್ರದೇಶವನ್ನಾಗಿ ಏನು ಪ್ರಕಟಣೆಯಾಗಿವೆ, ಅದರ ಸ್ವಾಧೀನ ತೆಗೆದುಕೊಳ್ಳುವುದರ ಬಗ್ಗೆ, ತಾವೇ ಅದಕ್ಕೆ ಒಪ್ಪಿಗೆ ಕೊಟ್ಟಿದ್ದೀರಿ. ಅದರ ಬಗ್ಗೆ ಸಿದ್ಧತೆಯನ್ನು ನಾನು ಮಾಡುತ್ತಿದ್ದೇನೆ. ತಕ್ಷಣ ಯಾವ್ಯಾವ ಪ್ರದೇಶಗಳು ಘೋಷಣೆ ಆಗಿಲ್ಲವೋ ಅವುಗಳನ್ನು ಸ್ವಾಧೀನ ತೆಗೆದುಕೊಂಡು ಅವರಿಗೆ ಗುರುತಿನ ಚೀಟಿ ನೀಡುವುದರ ಮುಖಾಂತರ ವಾಸಕ್ಕೆ ಮನೆ ಒದಗಿಸಿಕೊಡುವಂತಹ ಕಾರ್ಯಕ್ರಮ ಸರ್ಕಾರದಲ್ಲಿದೆ. ಮುಂದಿನ ವರ್ಷದಲ್ಲಿ ಈ ಕಾರ್ಯಕ್ರಮ ಜಾರಿಗೆ ತರುತ್ತೇವೆ.

ಶ್ರೀ ದಿನೇಶ್ ಗುಂಡೂರಾವ್: ಮಾನ್ಯ ಅಧ್ಯಕ್ಷರೆ, ಇವತ್ತು ಸ್ಲಂ ಪ್ರದೇಶಗಳಲ್ಲಿ ಅಭಿವೃದ್ಧಿ ಮಾಡತಕ್ಕಂಥದ್ದಕ್ಕೆ ನಿರ್ಮಲ ಜ್ಯೋತಿಯ ಕಾರ್ಯಕ್ರಮ ಇಡೀ ರಾಜ್ಯದಲ್ಲಿ ಮಾಡುತ್ತಿದ್ದಾರೆ. ಅದರ ವ್ಯಾಪ್ತಿ ಇಡೀ ಕರ್ನಾಟಕ ರಾಜ್ಯ ತೆಗೆದುಕೊಂಡಿದ್ದರೂ ಕೂಡ ಬೆಂಗಳೂರು ನಗರ ಅದಕ್ಕೆ

ಸೇರಿಸಿಕೊಂಡಿಲ್ಲ. ಆದ್ದರಿಂದ ಬೆಂಗಳೂರು ನಗರದ ಕೊಳಚೆ ಪ್ರದೇಶಗಳಲ್ಲಿ ಯಾವುದೇ ರೀತಿಯ ಅನುದಾನ ಬಹಳ ಕಡಿಮೆ ಬರುತ್ತಿದೆ. ಪ್ರತಿಯೊಂದು ಸ್ಲಂಗೆ ಎರಡು ಲಕ್ಷ ರೂ ಎರಡೂವರೆ ಲಕ್ಷರೂ ಕೊಡತಕ್ಕಂತಹ ಕೆಲಸವಾಗುತ್ತಿದೆ. ಆದ್ದರಿಂದ ಬೆಂಗಳೂರು ನಗರದಲ್ಲಿರುವ ಕೊಳಚೆ ಪ್ರದೇಶಗಳಲ್ಲಿ ಕೂಡ ನಿರ್ಮಲ ಜ್ಯೋತಿಯಲ್ಲಿ ದೊಡ್ಡ ಲೋನ್ ತೆಗೆದುಕೊಂಡು ಮಾಡಬೇಕೆಂದಿದ್ದೀರಿ, ಇಲ್ಲಿಯೂ ಕೂಡ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ತಾವು ಇದಕ್ಕೆ ಉತ್ತರ ಕೊಡಬೇಕು.

ಶ್ರೀ ಸಿ.ಆರ್. ಸಗೀರ್ ಅಹಮದ್: ಸನ್ಮಾನ್ಯ ಅಧ್ಯಕ್ಷರೆ, ವಿಶೇಷವಾಗಿ ಬೆಂಗಳೂರು ನಗರ ಹೆಚ್ಚಿನ ಪ್ರಮಾಣದಲ್ಲಿ ಬೆಳೆಯುತ್ತಿರುವುದರ ಜೊತೆಗೆ ಕೊಳಚೆ ಪ್ರದೇಶಗಳು ಹೆಚ್ಚಿಗೆ ಇರುವುದರಿಂದ ಬೆಂಗಳೂರು ನಗರದಲ್ಲಿರುವ ಕೊಳಚೆ ಪ್ರದೇಶಗಳ ಅಭಿವೃದ್ಧಿಗೆ ಸನ್ಮಾನ್ಯ ಮುಖ್ಯ ಮಂತ್ರಿಗಳ ನೇತೃತ್ವದಲ್ಲಿ ವಿಶೇಷವಾದ ಕಾರ್ಯಕ್ರಮ ರೂಪಿಸಿದ್ದೇವೆ. ಈ ಬೆಂಗಳೂರು ನಗರದ ಕೊಳಚೆ ಪ್ರದೇಶಗಳನ್ನು ನಾವು ಅಭಿವೃದ್ಧಿ ಪಡಿಸುತ್ತೇವೆ. ಜೊತೆಗೆ ಕೊಳಚೆ ಪ್ರದೇಶಗಳಲ್ಲಿ, ಅನೇಕ ಕೊಳಚೆ ಪ್ರದೇಶಗಳಲ್ಲಿ ವಾಸಿಸುತ್ತಿರುವ ಮನೆ ಇಲ್ಲದವರನ್ನು ಗುರುತಿಸಿದ್ದೇವೆ. ಬೆಂಗಳೂರು ನಗರದ ಎಲ್ಲಾ ಕೊಳಚೆ ಪ್ರದೇಶಗಳಲ್ಲಿ 2,000 ಕ್ಕೂ ಮೇಲ್ಪಟ್ಟು ಮನೆಗಳನ್ನು ನಿರ್ಮಿಸುವ ಯೋಜನೆ ಬೆಂಗಳೂರು ನಗರಕ್ಕೆ ನಾವು ಹಮ್ಮಿಕೊಂಡಿದ್ದೇವೆ.

ಅಧ್ಯಕ್ಷರು: ಪ್ರಶ್ನೋತ್ತರ ವೇಳೆ ಮುಗಿಯಿತು. ಇನ್ನು ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

(ಅ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ ಪರಿಸರ ಮತ್ತು ಜೀವಿ ಶಾಸ್ತ್ರ): ಮಾನ್ಯ ಅಧ್ಯಕ್ಷರೆ, 12.3.03ರ ಲಿಖಿತ ಮೂಲಕ ಉತ್ತರಿಸುವ 153 ಪ್ರಶ್ನೆಗಳ ಪೈಕಿ 80 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ಮಂಡಿಸಲಾಯಿತು. ಅನುಬಂಧ - 1

3. ಗಮನ ಸೆಳೆಯುವ ಸೂಚನೆಗಳು

(ಅ) ವಿಷಯ: ಕಂದಾಯ ಇಲಾಖೆ ನೌಕರರ ಮುಷ್ಕರ

ಶ್ರೀ ಯು.ಆರ್. ಸಭಾಪತಿ (ಉಡುಪಿ): ಮಾನ್ಯ ಅಧ್ಯಕ್ಷರೆ, ಕಂದಾಯ ನಿರ್ದೇಶನಾಲಯ ರಚನೆ ಸೇರಿದಂತೆ ನಾಡ ಕಛೇರಿ ರದ್ದತಿ ಪುನರ್ ಪರಿಶೀಲಿಸಿ, ಇನ್ನಿತರ ವಿವಿಧ ಬೇಡಿಕೆಗಳ ಬಗ್ಗೆ ರಾಜ್ಯದಾದ್ಯಂತ ಕಂದಾಯ ಇಲಾಖೆ ನೌಕರರು ಫೆಬ್ರವರಿ 28ರಂದು ಕಪ್ಪು ಪಟ್ಟಿ ಧರಿಸಿ ಕಛೇರಿಗೆ ಆಗಮಿಸಿ ಹಾಜರಾತಿ ಪುಸ್ತಕಕ್ಕೆ ಸಹಿ ಹಾಕಿ, ಲೇಖನಿ ಸ್ಥಗಿತ ಗೊಳಿಸಿ ನಡೆಸಿದ ಮುಷ್ಕರದ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಂಡಿರುವ ಬಗ್ಗೆ ಸದನಕ್ಕೆ ತಿಳಿಸುವಂತೆ ಹಾಗೂ ಕಂದಾಯ ನೌಕರರ ಬೇಡಿಕೆಗಳನ್ನು ಇಡೇರಿಸುವಂತೆ ಸರ್ಕಾರದ ನಿಲುವನ್ನು ಸದನಕ್ಕೆ ತಿಳಿಸುವಂತೆ ಸರ್ಕಾರದ ಗಮನ ಸೆಳೆಯುತ್ತೇನೆ.

+ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): ಸರ್ಕಾರವು ವಿಭಾಗಾಧಿಕಾರಿಗಳ ಹುದ್ದೆ ರದ್ದುಪಡಿಸಲು ತೀರ್ಮಾನಿಸಿರುತ್ತದೆ. ಇದಕ್ಕೆ ಪೂರಕವಾಗಿ ವಿಭಾಗಾಧಿಕಾರಿಗಳು ಚಲಾಯಿಸುತ್ತಿದ್ದ ಎಲ್ಲಾ ಮೇಲ್ಮನವಿ ಹಾಗೂ ಪುನರಾವಲೋಕನಾ ಪ್ರಕರಣಗಳನ್ನು ಕೆ.ಎ.ಟಿ.ಗೆ. ವರ್ಗಾಯಿಸಲು ಅಧಿಸೂಚನೆ ಹೊರಡಿಸಲಾಗಿರುತ್ತದೆ. ಇನ್ನುಳಿದಂತೆ